# ಬದಲಾಗುತ್ತಿರುವ ಹವಾಮಾನ ಪರಿಸ್ಥಿತಿಯಲ್ಲಿ ಆದಾಯ ಹೆಚ್ಚಿಸಲು ಅಂತರ ಬೆಳೆಗಳು

ಕರ್ನಾಟಕವು ಕೃಷಿ ಪ್ರಧಾನ ರಾಜ್ಯವಾಗಿದ್ದು ಖುಷ್ಕಿ ಬೇಸಾಯದಲ್ಲಿ ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಅವುಗಳಲ್ಲಿ ಅಕಾಲಿಕ / ಅನಿಶ್ಚಿತ ಮಳೆ, ಮಣ್ಣಿನ ಕೊಚ್ಚಣೆ, ಮಣ್ಣಿನ ಆರೋಗ್ಯ ಸಂರಕ್ಷಣೆ, ಬರ ಸನ್ನಿವೇಶಕ್ಕನುಗುಣವಾಗಿ ಬೆಳೆ ಯೋಜನೆಗಳು ಪ್ರಮುಖ ಸಮಸ್ಯೆಗಳಾಗಿದ್ದು ಅವುಗಳನ್ನು ಬೆಳೆ ಪದ್ಧತಿಯ ಮೂಲಕ ಪರಿಹರಿಸುವ ಕ್ರಮಗಳು ಬಹು ಮುಖ್ಯವಾಗಿವೆ. ಸಾಮಾನ್ಯವಾಗಿ ಖುಷ್ಕಿ ಬೇಸಾಯದ ರೈತರು ವರ್ಷದಿಂದ ವರ್ಷಕ್ಕೆ ಏಕ ಬೆಳೆ ಪದ್ಧತಿ ಅಳವಡಿಸುವುದರಿಂದ ಮಣ್ಣು ಕೊಚ್ಚಣಿ, ಮಣ್ಣು ಮತ್ತು ನೀರಿನ ನಷ್ಟದ ತೀವ್ರತೆ ಹೆಚ್ಚಾಗಿರುತ್ತದೆ. ಈ ಸಮಸ್ಯೆಯನ್ನು ತಡೆಗಟ್ಟಲು ರೈತರು ಮಣ್ಣು ಕೊಚ್ಚಣೆಯ ನಿರೋಧಕ ಬೆಳೆಗಳನ್ನು, ಅಂತರ ಬೆಳೆ ಹಾಗೂ ಬೆಳೆ ಪರಿವರ್ತನೆ ಕೈಗೊಂಡಾಗ ಮಣ್ಣು ಮತ್ತು ನೀರಿನ ನಷ್ಟದ ಪ್ರಮಾಣವನ್ನು ಕಡಿಮೆಗೊಳಿಸಬಹುದು. ಖುಷ್ಕಿ ಪದ್ಧತಿಯ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಅಖಿಲ ಭಾರತ ಸುಸಂಘಟಿತ ಖುಷ್ಕಿ ಬೇಸಾಯ ಪ್ರಾಯೋಜನೆಯ ರಾಷ್ಟ್ರೀಯ ಹವಾಮಾನ ಶೀಘ್ರ ಕೃಷಿ ಚೇತರಿಕಾ ಅವಿಷ್ಕಾರ ಯೋಜನೆಯ ಅಡಿಯಲ್ಲಿ ನೆಲಮಂಗಲ ತಾಲ್ಲೂಕಿನ ಚಿಕ್ಕಮುಟ್ಟಯ್ಯನಪಾಳ್ಯ, ಚಿಕ್ಕಮಾರನಹಳ್ಳಿ, ಚಿಕ್ಕಮಾರನಹಳ್ಳಿ ಕಾಲೋನಿ, ಹೊಸಪಾಳ್ಯ, ಚಿಕ್ಕಹೊಸಪಾಳ್ಯ ಮತ್ತು ಮೂಡಲಪಾಳ್ಯ ಎಂಬ ಆರು ಹಳ್ಳಿಯ ರೈತರ ತಾಕುಗಳಲ್ಲಿ ಮಳೆಗನುಸಾರವಾದ ಅಂತರ ಬೆಳೆ ಪದ್ಧತಿಗಳ ಪ್ರಾತ್ಯಕ್ಷಿಕೆ ಕೈಗೊಳ್ಳಲಾಯಿತು. ಈ ಯೋಜನೆಯ ಹವಾಮಾನ ವೈಪರೀತ್ಯದಿಂದಾಗುವ ಪರಿಣಾಮಕ್ಕೆ ಹೊಂದಾಣಿಕೆ ಕ್ರಮಗಳನ್ನು ರೈತರ ಸಹಭಾಗಿತ್ವದಲ್ಲಿ ಸಂಶೋಧಿಸುವ ಉದ್ದೇಶದೊಂದಿಗೆ 2011 ರಲ್ಲಿ ಪ್ರಾರಂಭಿಸಲಾಯಿತು. ಇಲ್ಲಿ ರೈತರು ಹೆಚ್ಚಾಗಿ ರಾಗಿ, ಜೋಳ, ನೆಲಗಡಲೆ ಹಾಗೂ ತೊಗರಿ ಆಧಾರಿತ ಬೆಳೆ ಪದ್ಧತಿ ಅನುಸರಿಸುತ್ತಿದ್ದಾರೆ.

## ಅಂತರ ಬೆಳೆಗಳು

ಎರಡು ಅಥವಾ ಹೆಚ್ಚು ಬೆಳೆಗಳನ್ನು ಒಂದೇ ಜಮೀನಿನಲ್ಲಿ ಒಂದೇ ಸಮಯದಲ್ಲಿ ನಿಗದಿತ ಸಾಲುಗಳ ಅಂತರದಲ್ಲಿ ಬೆಳೆಯುವ ಪದ್ಧತಿಯನ್ನು ಅಂತರ ಬೆಳೆ ಪದ್ಧತಿ ಎಂದು ಕರೆಯಲಾಗುತ್ತದೆ.

## ಅಂತರ ಬೆಳೆಗಳ ಉಪಯೋಗ / ಅನುಕೂಲಗಳು

- ಹವಾಮಾನ ವೈಪರೀತ್ಯದಿಂದುಂಟಾಗುವ ಬೆಳೆ ಹಾನಿಯ ಮಟ್ಟವನ್ನು ತಗ್ಗಿಸುವುದು.
- ಮಣ್ಣಿನ ಸವಕಳಿ ಹಾಗೂ ನೀರಿನ ನಷ್ಟ ತಗ್ಗಿಸುತ್ತದೆ.
- ಭೂಮಿಯ ಮೇಲ್ಮೈ ಹೊದಿಕೆಯಂತೆ ವರ್ತಿಸಿ ಮಣ್ಣಿನ ಕೊಚ್ಚಣೆ ಮತ್ತು ಆವಿಯಾಗುವ ನೀರಿನ ಪ್ರಮಾಣವನ್ನು ತಗ್ಗಿಸುತ್ತದೆ.
- ದ್ವಿದಳ ಜಾತಿಗೆ ಸೇರಿದ ಬೆಳೆಗಳನ್ನು ಅಂತರ ಬೆಳೆಯಾಗಿ ಬೆಳೆಯುವುದರಿಂದ ಮಣ್ಣಿನಲ್ಲಿ ಸಾವಯವ ಅಂಶ ಹೆಚ್ಚಾಗುವುದಲ್ಲದೆ ಮಣ್ಣಿನ ಸುಸ್ಥಿರತೆ ಸಾಧ್ಯವಾಗುತ್ತದೆ.
- ಕಳೆಗಳ ಹತೋಟಿ.
- ಕೆಲವು ತೋಟಗಾರಿಕೆ ಬೆಳೆಗಳಲ್ಲಿ ನೆರಳೊದಗಿಸಲು ಅಂತರ ಬೆಳೆಗಳು ಅವಶ್ಯಕ.
- ದೊರೆಯುವ ಪರಿಕರಗಳ ಸದುಪಯೋಗಕ್ಕೆ ಅಂತರ ಬೆಳೆಗಳು ಸಹಕಾರಿ.
- ಅಂತರ ಬೆಳೆಗಳಿಂದ ಒಟ್ಟಾರೆ ಆದಾಯದಲ್ಲಿ ಹೆಚ್ಚಳ.

## ವಿವಿಧ ಬೆಳೆಗಳಲ್ಲಿ ಅಂತರ ಬೆಳೆಗಳು

1. ರಾಗಿ + ತೊಗರಿ (8:2)
2. ಮುಸುಕಿನ ಜೋಳ + ತೊಗರಿ (1:1)
3. ರಾಗಿ + ಹರಳು (2:1)
4. ರಾಗಿ + ಸೋಯಾಅವರೆ (4:2)
5. ರಾಗಿ + ಅಲಸಂದೆ (8:1)
6. ನೆಲಗಡಲೆ + ತೊಗರಿ (8:2)
7. ನೆಲಗಡಲೆ + ಹರಳು (8:1)
8. ತೊಗರಿ + ಅಲಸಂದೆ / ಅವರೆ / ಸೋಯಾಅವರೆ (1:1)



## ಬೆಳೆಗನುಗುಣವಾದ ಸೂಕ್ತ ಅಂತರ ಬೆಳೆಗಳು

### ರಾಗಿ ಮತ್ತು ತೊಗರಿ (8:2)


ರಾಗಿ ಮತ್ತು ತೊಗರಿ (8:2)

ಸಾಮಾನ್ಯವಾಗಿ ರಾಗಿಯನ್ನು ಅಕ್ಕಡಿ ಸಾಲುಗಳೊಂದಿಗೆ ಬೆಳೆಯುವುದು ರೂಢಿ. ಅಕ್ಕಡಿ ಸಾಲಿನಲ್ಲಿ ನವ ಧಾನ್ಯಗಳನ್ನು ಒಟ್ಟಾಗಿ ಬೆಳೆಯುತ್ತಾರೆ. ಇದರಿಂದ ಬೆಳೆಗಳ ಮಧ್ಯೆ ಪೈಪೋಟಿ ಹೆಚ್ಚಾಗಿ ಬೆಳವಣಿಗೆ ಕುಂಠಿತವಾಗುವುದಲ್ಲದೆ ಕಟಾವು ಮಾಡುವುದು ಕಷ್ಟವಾಗುತ್ತದೆ. ಈ ರೀತಿ ಮಾಡುವ ಬದಲು 8 ಸಾಲು ರಾಗಿ (1 ಅಡಿ ಅಂತರ) ಮತ್ತು 2 ಸಾಲು ತೊಗರಿ (2 ಅಡಿ ಅಂತರ) ಹಾಗೂ ತೊಗರಿ ಸಾಲುಗಳ ಮಧ್ಯೆ ದೋಣಿ ಸಾಲು ತೆಗೆದು ಮಣ್ಣು ಮತ್ತು ನೀರು ಸಂರಕ್ಷಣೆ ಮಾಡಬಹುದು. ಇದರಿಂದ ಎರಡೂ ಕಡೆಯ 4 ರಾಗಿ ಸಾಲುಗಳಿಗೆ ದೋಣಿ ಸಾಲಿನಿಂದ ಸಂಗ್ರಹಿತ ತೇವಾಂಶ ಪೂರೈಕೆಯಾಗುತ್ತದೆ. ಈ ರೀತಿ ಮಾಡುವುದರಿಂದ ಹೆಚ್ಚಿನ ಇಳುವರಿ ಹಾಗೂ ಆದಾಯವನ್ನು ಪಡೆಯಬಹುದು. ಅಲ್ಲದೆ ತೊಗರಿಯು 25–35 ಕಿ. ಗ್ರಾಂ. ಸಾರಜನಕವನ್ನು ಭೂಮಿಗೆ ಸೇರಿಸುತ್ತದೆ. ಒಂದು ಹೆಕ್ಟೇರ್ ಪ್ರದೇಶದಲ್ಲಿ ರಾಗಿಯಲ್ಲಿ 35–40 ಕ್ವಿಂಟಾಲ್ ಹಾಗೂ ತೊಗರಿಯಲ್ಲಿ 3.0–3.5 ಕ್ವಿಂಟಾಲ್ ಇಳುವರಿಯನ್ನು ಪಡೆಯಬಹುದು.

### ಮುಸುಕಿನ ಜೋಳ + ತೊಗರಿ (1:1)


ಮುಸುಕಿನ ಜೋಳ + ತೊಗರಿ (1:1)

ಸಾಮಾನ್ಯವಾಗಿ ಮುಸುಕಿನ ಜೋಳವನ್ನು ಅನಿಶ್ಚಿತ ಮಳೆಯ ಹಂಚಿಕೆಯ ಪ್ರದೇಶದಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಮುಸುಕಿನ ಜೋಳದಲ್ಲಿ ಕುಚ್ಚು ಬಿಡುವ ಸಮಯದಲ್ಲಿ ತೇವಾಂಶದ ಕೊರತೆ ಕಂಡುಬಂದರೆ ಇದರ ಇಳುವರಿಯು ತೀರಾ ಕಡಿಮೆಯಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಬೆಳೆಯ ಇಳುವರಿ ಹಾಗೂ ಲಾಭವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಮುಸುಕಿನಜೋಳದಲ್ಲಿ ತೊಗರಿಯನ್ನು (45 ಸೆಂ. ಮೀ. ಅಂತರ) ಪರ್ಯಾಯ ಸಾಲುಗಳಲ್ಲಿ ಬೆಳೆಯಬಹುದು. ಒಂದು ಹೆಕ್ಟೇರ್ ಪ್ರದೇಶದಲ್ಲಿ ಮುಸುಕಿನ ಜೋಳದಲ್ಲಿ 35–36 ಕ್ವಿಂ. ಹಾಗೂ ತೊಗರಿಯಲ್ಲಿ 3.0–4.0 ಕ್ವಿಂ. ಇಳುವರಿಯನ್ನು ಪಡೆಯಬಹುದು.

### ರಾಗಿ + ಹರಳು (2:1)


ರಾಗಿ + ಹರಳು (2:1)

ಎರಡು ಸಾಲು ರಾಗಿ ಒಂದು ಸಾಲು ಹರಳನ್ನು (30 ಸೆಂ. ಮೀ. ಅಂತರ) ಒಟ್ಟಿಗೆ ಬಿತ್ತನೆ ಮಾಡಿ 45 ದಿನಗಳ ನಂತರ ಹರಳಿನಲ್ಲಿ ವಾರಕ್ಕೊಮ್ಮೆ ಕುಡಿ ಚಿವುಟಿ, ಪ್ರತಿ ಗಿಡಕ್ಕೆ 4–5 ತೆನೆಗಳನ್ನು ಮಾತ್ರ ಉಳಿಸಿಕೊಂಡರೆ ಹರಳಿನಲ್ಲಿ ಹೆಚ್ಚಿನ ಇಳುವರಿಯನ್ನು ಪಡೆಯಬಹುದು. ಈ ರೀತಿಯಾದ ಅಂತರ ಬೆಳೆಯನ್ನು ಅನುಸರಿಸುವುದರಿಂದ ಹೆಚ್ಚಿನ ಆದಾಯವನ್ನು ಗಳಿಸಬಹುದು. ಒಂದು ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಇಳುವರಿಯು 23.0–32.0 ಕ್ವಿಂ. ಹಾಗೂ ಹರಳಿನ ಇಳುವರಿ 5–7 ಕ್ವಿಂ. ಪಡೆಯಬಹುದು.

### ರಾಗಿ + ಸೋಯಾಅವರೆ (4:2)

ನಾಲ್ಕು ಸಾಲು ರಾಗಿ ಮತ್ತು ಎರಡು ಸಾಲು ಸೋಯಾಅವರೆಯನ್ನು (30 ಸೆಂ. ಮೀ. ಅಂತರ) ಅಂತರ ಬೆಳೆಯಾಗಿ ಬೆಳೆಯುವುದರಿಂದ ಸೋಯಾಅವರೆ ಭೂಮಿಯ ಆರೋಗ್ಯ ಮತ್ತು ಫಲವತ್ತತೆಯನ್ನು ಉತ್ತಮಗೊಳಿಸುತ್ತದೆ ಮತ್ತು ಅಧಿಕ ಇಳುವರಿಯನ್ನು ಪಡೆಯಬಹುದು. ಒಂದು ಹೆಕ್ಟೇರ್ ಪ್ರದೇಶದಲ್ಲಿ ರಾಗಿಯಲ್ಲಿ 35–40 ಕ್ವಿಂ. ಹಾಗೂ ಸೋಯಾಅವರೆಯಲ್ಲಿ 5–6 ಕ್ವಿಂ. ಇಳುವರಿಯನ್ನು ಅಂತರ ಬೆಳೆಯಲ್ಲಿ ಪಡೆಯಬಹುದು.

### ರಾಗಿ + ಅಲಸಂದೆ / ಅವರೆ (8:1)


ರಾಗಿ + ಅಲಸಂದೆ/ ಅವರೆ (8:1)

8 ಸಾಲು ರಾಗಿ ಒಂದು ಸಾಲು ಅಲಸಂದೆಯನ್ನು (30 ಸೆಂ. ಮೀ. ಅಂತರ) ಅಂತರ ಬೆಳೆಯಾಗಿ ಬೆಳೆಯುವುದರಿಂದ ಮಣ್ಣಿನ ಫಲವತ್ತತೆಯನ್ನು ಕಾಪಾಡಬಹುದು ಮತ್ತು ರಾಗಿಯಲ್ಲಿ ಹೆಚ್ಚಿನ ಇಳುವರಿಯನ್ನು ಗಳಿಸಬಹುದು. ಅಲಸಂದೆಯನ್ನು ಎಲ್ಲಾ ಏಕದಳ ಧಾನ್ಯ ಬೆಳೆಗಳಲ್ಲಿ ಅಂತರ ಬೆಳೆಯಾಗಿ ಬೆಳೆಯುವುದು ಸಾಮಾನ್ಯ. ಇಂತಹ ಪದ್ಧತಿಯಲ್ಲಿ ಅಲಸಂದೆಯನ್ನು ಮೇವಿಗಾಗಿ ಅಥವಾ ಹಸಿರೆಲೆ ಗೊಬ್ಬರವಾಗಿ ಉಪಯೋಗಿಸಬಹುದು. ಒಂದು ಹೆಕ್ಟೇರ್ ಪ್ರದೇಶದಲ್ಲಿ ರಾಗಿಯಲ್ಲಿ 35–40 ಕ್ವಿಂ. ಅಲಸಂದೆಯಲ್ಲಿ 5–6 ಕ್ವಿಂ. ಇಳುವರಿಯನ್ನು ಅಂತರ ಬೆಳೆಯಲ್ಲಿ ಪಡೆಯಬಹುದು.

### ನೆಲಗಡಲೆ + ತೊಗರಿ (8:2)


ನೆಲಗಡಲೆ + ತೊಗರಿ (8:2)

ನೆಲಗಡಲೆ ಬೆಳೆಯನ್ನು ಒಂದೇ ಬೆಳೆಯಾಗಿ ಬೆಳೆಯುವುದು ರೂಢಿಯಲ್ಲಿದೆ. ಆದರೆ ನೆಲಗಡಲೆ (30 ಸೆಂ. ಮೀ. ಅಂತರ) + ತೊಗರಿಯನ್ನು (60 ಸೆಂ. ಮೀ. ಅಂತರ) (8:2) ಪ್ರಮಾಣದಲ್ಲಿ ಅಂತರ ಬೆಳೆಯಾಗಿ ಬೆಳೆಯುವುದರಿಂದ ಹೆಚ್ಚಿನ ಉತ್ಪನ್ನವನ್ನು ತೆಗೆಯಬಹುದು. ಈ ಪದ್ಧತಿಯಲ್ಲೂ ತೊಗರಿ ಸಾಲುಗಳ ಮಧ್ಯೆ ದೋಣಿ ಸಾಲು ನಿರ್ಮಿಸಬೇಕು. ಒಂದು ಹೆಕ್ಟೇರ್ ಪ್ರದೇಶದಲ್ಲಿ 7–8 ಕ್ವಿಂ. ನೆಲಗಡಲೆ ಹಾಗೂ 2–3 ಕ್ವಿಂ. ತೊಗರಿ ಇಳುವರಿಯನ್ನು ಪಡೆಯಬಹುದು.

### ತೊಗರಿ + ಅಲಸಂದೆ / ಸೋಯಾಅವರೆ / ಅವರೆ (1:1)


ತೊಗರಿ + ಅಲಸಂದೆ / ಸೋಯಾಅವರೆ/ಅವರೆ (1:1)

ತೊಗರಿ (90 ಸೆಂ. ಮೀ. ಅಂತರ) ಸಾಲುಗಳ ನಡುವೆ ಅಂತರವು ಹೆಚ್ಚಾಗಿರುವುದರಿಂದ ಹಾಗೂ ಪ್ರಾರಂಭಿಕ ಹಂತದಲ್ಲಿ ತೊಗರಿಯ ಬೆಳವಣಿಗೆಯು ನಿಧಾನವಾಗುವುದರಿಂದ, ಎರಡು ತೊಗರಿಯ ಸಾಲುಗಳ ನಡುವೆ ಇರುವ ಅಂತರವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಅಲ್ಪಾವಧಿ ಬೆಳೆಗಳಾದ ಅಲಸಂದೆ/ಸೋಯಾಅವರೆ/ಅವರೆಯನ್ನು 1:1 ಅನುಪಾತದಲ್ಲಿ ಬೆಳೆಯಬಹುದು. ಈ ರೀತಿ ಬೆಳೆಯುವುದರಿಂದ ಹೆಚ್ಚಿನ ಆದಾಯವನ್ನು ಎರಡು ಹಂತಗಳಲ್ಲಿ ಪಡೆಯಬಹುದು. ಕೊಯ್ಲಿನ ನಂತರ ಅಂತರ ಬೆಳೆಗಳ ಉಳಿಕೆಯನ್ನು ಮೇವಾಗಿ ಅಥವಾ ಹೊದಿಕೆಯಾಗಿ ಬಳಸಿ ಮಣ್ಣಿನ ತೇವಾಂಶವನ್ನು ಸಂರಕ್ಷಿಸಿ ಸಾವಯವ ವಸ್ತುವನ್ನು ಭೂಮಿಗೆ ಸೇರಿಸಬಹುದು. ಒಂದು ಹೆಕ್ಟೇರ್ ಪ್ರದೇಶದಲ್ಲಿ ತೊಗರಿಯಲ್ಲಿ 10–12 ಕ್ವಿಂ. ಹಾಗೂ ಅಲಸಂದೆ/ಸೋಯಾ ಅವರೆ/ಅವರೆಯಲ್ಲಿ 6–8 ಕ್ವಿಂ. ಇಳುವರಿಯನ್ನು ಪಡೆಯಬಹುದು.

### ನೆಲಗಡಲೆ + ಹರಳು (8:1)


ನೆಲಗಡಲೆ + ಹರಳು (8:1)

8 ಸಾಲು ನೆಲಗಡಲೆ ಮತ್ತು ಒಂದು ಸಾಲು ಹರಳನ್ನು (30 ಸೆಂ. ಮೀ. ಅಂತರ) ಏಕ ಕಾಲದಲ್ಲಿ ಬಿತ್ತನೆ ಮಾಡುವುದು ಹಾಗೂ ಹರಳಿನಲ್ಲಿ ಕುಡಿ ಚಿವುಟುವುದರಿಂದ ಅಧಿಕ ಇಳುವರಿ ಪಡೆಯಬಹುದು. ಒಂದು ಹೆಕ್ಟೇರ್ ಪ್ರದೇಶದಲ್ಲಿ ನೆಲಗಡಲೆಯಲ್ಲಿ 6–8 ಕ್ವಿಂ. ಹಾಗೂ ಹರಳಿನಲ್ಲಿ 1–2 ಕ್ವಿಂ. ಇಳುವರಿಯನ್ನು ಅಂತರ ಬೆಳೆಯಲ್ಲಿ ಪಡೆಯಬಹುದು.

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ**

**ಮುಖ್ಯ ವಿಜ್ಞಾನಿ**

ಖುಷ್ಕಿ ಬೇಸಾಯ ಪ್ರಾಯೋಜನೆ

Designed & Printed by:
AVA 9901556099



# ಬದಲಾಗುತ್ತಿರುವ ಹವಾಮಾನ ಪರಿಸ್ಥಿತಿಯಲ್ಲಿ ಆದಾಯ ಹೆಚ್ಚಿಸಲು ಅಂತರ ಬೆಳೆಗಳು

ಡಾ. ಮೂಡಲಗಿರಿಯಪ್ಪ
ಡಾ. ಎಂ. ಎನ್. ತಿಮ್ಮೇಗೌಡ
ಶ್ರೀ ಹರ್ಷ ಕುಮಾರ್, ಎಸ್. ಎಸ್.
ಸವಿತ, ಎಂ. ಎಸ್.
ಡಾ. ಬಿ. ಜಿ. ವಾಸಂತಿ
ಪುನೀತಾ, ಕೆ. ಎಂ.

ಅಖಿಲ ಭಾರತ ಸುಸಂಘಟಿತ ಖುಷ್ಕಿ ಬೇಸಾಯ ಪ್ರಾಯೋಜನೆ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು – 560 065

**2019**